ಕಥೆಗಳನ್ನು ಬರೆದಿರಬಹುದು, ಅವು ಎಲ್ಲೆಲ್ಲೋ ಹಾರಿ ಹೋಗಿವೆ, ಅವುಗಳಲ್ಲಿನ ಎಷ್ಟೋ ಕಥೆಗಳು ತಮ್ಮ ಮೂಲ ಚಹರೆ ಬದಲಿಸಿಕೊಂಡಿವೆ. ಕೆಲವು ಕಥೆಗಳು ಎತ್ತಿಕೊಂಡವರ ಕೈಗೂಸುಗಳಾಗಿವೆ. ಆದರೆ ಕೆಲವು ಕಥೆಗಳನ್ನು ಮಾತ್ರ ಮರೆಯಲಾರೆ. ಎಪ್ಪತ್ಮೂರು ಡಿಸೆಂಬರಲ್ಲಿ ದ್ಯಾವಮ್ಮನ ಜಾತ್ರೆ ನೋಡಲೆಂದು ಹಾರಕನಾಳಿಗೆ ಹೋಗಿದ್ದೆ. ಅಲ್ಲಿ ಕುರಿ ಮೇಕೆಗಳೊಂದೇ ಅಲ್ಲದೆ ಕೋಣದ ಬಲಿಯನ್ನು ಹತ್ತಿರದಿಂದ ನೋಡಿದೆ. ಆ ಅನುಭವ ಆಧರಿಸಿ 'ಬಲಿ' ಹೆಸರಿನ ಕಥೆ ಬರೆದೆ. 'ಗುಂಪು' ಹೆಸರಿನ ಬಳ್ಳಾರಿ ಜಿಲ್ಲಾ ಕಥೆಗಾರರ ಸಂಕಲನದಲ್ಲಿ ಅದು ಪ್ರಕಟವಾಯಿತು. ಅದನ್ನು ಡಾ. ಶಾಂತಿನಾಥ ದೇಸಾಯಿ 'ಪ್ರಜಾವಾಣಿ'ಗೆ ಬರೆದ ವಿಮರ್ಶೆಯಲ್ಲಿ ಕಥೆಯನ್ನೂ ನನ್ನನ್ನೂ ಮುಕ್ತಕಂಠದಿಂದ ಶ್ಲಾಘಿಸಿದರು, ಜಾತ್ರೆಯ ಚಿತ್ರಣ 'ಅರಮನೆ' ಕಾದಂಬರಿಯಲ್ಲಿ ಆವಿರ್ಭವಿಸಿತು.

'ಕೂಳು', 'ಬೇಟೆ', 'ಡೋಮ', 'ಬೇಲಿ ಮತ್ತು ಹೊಲ', 'ಕೊಟ್ರ ಹೈಸ್ಕೂಲಿಗೆ ಸೇರಿದ್ದು' ಇವೇ ಮೊದಲಾದ ಕಥೆ ಕಾದಂಬರಿಗಳನ್ನು ಪ್ರಕಟಿಸಿ ಪ್ರೋತ್ಸಾಹಿಸಿದ 'ಮಯೂರ' ಭಾರತದ ಶ್ರೇಷ್ಠ ಸದಭಿರುಚಿ ಮಾಸಿಕಗಳಲ್ಲಿ ಒಂದು. ಅದರ ಸಂಪಾದಕರಾಗಿದ್ದ ಎಂ.ಬಿ. ಸಿಂಗ್, ಜಿ.ಎಸ್. ಸದಾಶಿವ, ಜಿ.ಎನ್. ರಂಗನಾಥರಾವ್ ಇವರೆಲ್ಲ ನನ್ನೊಳಗಿನ ಕಥೆಗಾರನನ್ನು ಬೆಳೆಸಿದ ಮಹಾನುಭಾವರು. ಸರಿಸುಮಾರು ಐದು ದಶಕಗಳಿಂದ ಕಥೆ ಬರೆಯುತ್ತಿರುವ ನಾನು ಅಲೆಮಾರಿ ಪರಪುಟ್ಟ ನನ್ನ ತಂದೆಯ ಹಾಗೆ. ಮಗ್ಗಿ ಬರುವುದಿಲ್ಲವೆಂಬ ಕಾರಣಕ್ಕೆ ಬರೆದಿದ್ದ ಕಥೆ ಕವಿತೆಗಳನ್ನು ಲೆಕ್ಕಿಸದೆ ಶಿಕ್ಷಕ ನೌಕರಿ ನಿರಾಕರಿಸಿದ ಕರ್ನಾಟಕ ನನಗೆ ಜನ್ಮ ನೀಡಿದ ರಾಜ್ಯ. ಆದರೆ ತುರ್ತುಪರಿಸ್ಥಿತಿ ಪ್ರತಿಭಟಿಸಿ ಪೊಲೀಸರಿಂದ ಒದೆ ತಿಂದು ಹುತಾತ್ಮನಾಗಬೇಕೆಂದಿದ್ದ ನನಗೆ ಆಶ್ರಯ ನೀಡಿದ್ದು ನೆರೆಯ ಆಂಧ್ರಪ್ರದೇಶ. ರಸ್ತೆ, ನೀರು, ವಿದ್ಯುತ್, ಕಾಮನ್‌ಸೆನ್ಸ್‌ನಂಥ ಕನಿಷ್ಠ ಸೌಲಭ್ಯಗಳಿರದಿದ್ದ ವಂದವಾಗಿಲಿ ಹೆಸರಿನ ಗ್ರಾಮದಲ್ಲಿ ಒಂಬತ್ತು ವರ್ಷಗಳ ಕಾಲ ಇದ್ದೆ. ಅಲ್ಲಿ ಅಕ್ಷರಶಃ ಯೋಧನಂತೆ ಕೆಲಸ ಮಾಡಿದೆ. ಆ ಗ್ರಾಮದ ಇತಿಹಾಸದಲ್ಲಿ ಮೊಟ್ಟಮೊದಲು ಶೂದ್ರರ ಅಸ್ಪೃಶ್ಯರ ಮಕ್ಕಳಿಗೆ ಪುನರ್‌ನಾಮಕರಣ ಮಾಡಿ ಅಕ್ಷರ ಕಲಿಸಿದ ತೃಪ್ತಿ ನನ್ನದು. ಅಲ್ಲಿನ ಜಮೀನ್ದಾರಿ ವ್ಯವಸ್ಥೆಯ ಎಲ್ಲಾ ಮುಖಗಳನ್ನು ಸಾರ್ವಜನಿಕವಾಗಿ ಅನಾವರಣಗೊಳಿಸಿದ ಸಾಹಸಿಗ ನಾನು. ಅಲ್ಲೊಂದೆ ಅಲ್ಲದೆ ಇಡಿ ರಾಯಲಸೀಮಾದ ನಾಲ್ಕೂ ಜಿಲ್ಲೆಗಳಲ್ಲಿನ ಸಾಮಾಜಿಕ ವ್ಯವಸ್ಥೆಯನ್ನು ಅಮೂಲಾಗ್ರ ಅಧ್ಯಯನ ಮಾಡಿದವನು ನಾನು, ತೆಲುಗು ಭಾಷೆಯ ವಿವಿಧ ಸ್ಥಳೀಯತೆಯನ್ನು ಜೀರ್ಣಿಸಿಕೊಂಡು ನಾಲ್ಕು ನೂರಕ್ಕೂ ಹೆಚ್ಚು ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದವನು ನಾನು. ಮಲ್ಲೇಪುರಂ ಅವರ ಪಂಥಾಹ್ವಾನವನ್ನು ಸ್ವೀಕರಿಸಿ ಕೇವಲ ಒಂದು ವಾರದಲ್ಲಿ ಕಾದಂಬರಿ (ಕಪ್ಪು – ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕೃತ) ಬರೆದವನು ನಾನು. ರಾಯಲಸೀಮಾದ ಪ್ರಪ್ರಥಮ ಕಲೆಕ್ಟರ್ ಸರ್ ಥಾಮಸ್ ಮನ್ರೋನ ವ್ಯಕ್ತಿತ್ವಕ್ಕೆ ಮಾರು ಹೋಗಿ 'ಅರಮನೆ' ಹೆಸರಿನ ಕಾದಂಬರಿಯನ್ನು ಹದಿನೈದು ವರ್ಷಗಳ ಕಾಲ ಬರೆದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದು ಪ್ರೈಮರಿ ಸ್ಕೂಲ್ ಟೀಚರ್ಸ್ ತಾರಾಮೌಲ್ಯ ಹೆಚ್ಚಿಸಿದವನು ನಾನು. ನೂರಾರು ಕಥೆಗಳನ್ನು ಬರೆಯುವುದರ ಮೂಲಕ ಆಂತರಂಗಿಕ ಸ್ವಾಸ್ಥ್ಯ ಕಾಪಾಡಿಕೊಂಡವನು ನಾನು. ಬರಹದಂತೆ ಬದುಕಿದವನು ನಾನು. ಹೇಗೆ ಬದುಕಿದೆನೋ ಹೇಗೆ ಬರೆದೆನೋ! ನನಗೆ ನಾನೇ ವಿಸ್ಮಯ. ಆದರೆ ಒಂದಂತು ನಿಜ, ನನ್ನ ಯಾವ ಕಥೆ ಕಾದಂಬರಿ ಕಾಲ್ಪನಿಕವಲ್ಲ. ನನ್ನಿಂದ ಅವು ಬರೆಸಿಕೊಂಡವೆ ವಿನಃ ಅವುಗಳನ್ನು ಬರೆದವನು ನಾನಲ್ಲವೇ ಅಲ್ಲ. ಹೆಚ್ಚಿನ ವಿವರಗಳಿಗೆ ನನ್ನ ಆತ್ಮಕಥೆ 'ಗಾಂಧಿಕ್ಲಾಸು' ಪರಿಶೀಲಿಸಿ...